ಸ್ಮೃತಿಯಲ್ಲಿ ಹೇಳಿರುವ ಅನೇಕ ಬಗೆಯ ದಾನಗಳನ್ನು ಮಾಡುತ್ತಾರೆ. ಮಕರಸಂಕ್ರಮಣದಲ್ಲಿ ಕಟ್ಟಿಗೆ ಮತ್ತು ಬೆಂಕಿಯನ್ನು ದಾನ ಮಾಡಬೇಕೆಂದು 'ಧರ್ಮಸಿಂಧು' ಎಂಬ ಗ್ರಂಥದಲ್ಲಿ ಹೇಳಿದೆ. ಹಾಗೆಯೇ ಮುತ್ತೈದೆ ಸ್ತ್ರೀಯರನ್ನು, ಸುವಾಸಿನಿಯರನ್ನು ಮನೆಗೆ ಕರೆದು ಬಾಗಿನ ಕೊಡುವ ಸಂಪ್ರದಾಯವೂ ಇದೆ. ಕುಲಪುರೋಹಿತರಿಗೆ ಪಾತ್ರೆಗಳನ್ನು ದಾನವಾಗಿ ಕೊಡುತ್ತಾರೆ. ಎಳ್ಳು ಬೀರಲು ಮನೆ ಮನೆಗೆ ಹೋಗುವುದು, ಎಳ್ಳು–ಬೆಲ್ಲ, ಸಕ್ಕರೆ ಅಚ್ಚು, ಕಬ್ಬುಗಳನ್ನು ಪರಸ್ಪರ ಕೊಟ್ಟು ತೆಗೆದುಕೊಳ್ಳುವುದು – ಈ ಸಂಪ್ರದಾಯಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಕಬ್ಬಿನ ಕಟಾವು ಆಗಷ್ಟೆ ಆಗಿರುತ್ತದೆ. ಹೀಗಾಗಿ ಕಬ್ಬನ್ನು ಕೊಡುವ ಸಂಪ್ರದಾಯ ಬಂದಿರಬಹುದು. ಎಳ್ಳನ್ನು ಆರು ವಿಧವಾಗಿ ಉಪಯೋಗಿಸುವವರು ಯಾವತ್ತೂ ಅವನತಿಯನ್ನು ಕಾಣುವುದಿಲ್ಲವೆಂದು 'ಶಾತಾತಪ ಸ್ಮೃತಿ' ಯಲ್ಲಿ ಹೇಳಿದೆ. ಹಾಗೆಯೇ ಎಳ್ಳು ಬೆರೆತ ನೀರಿನಲ್ಲಿ ಸ್ನಾನ, ಎಳ್ಳೆಣ್ಣೆಯನ್ನು ಮೈಗೆ ಹಚ್ಚಿಕೊಳ್ಳುವುದು, ಶುಚಿಯಾಗಿದ್ದು ಪಿತೃಗಳಿಗೆ ಎಳ್ಳಿನಿಂದ ತರ್ಪಣ ನೀಡುವುದು, ಎಳ್ಳನ್ನು ಹೋಮದಲ್ಲಿ ಆಹುತಿ ನೀಡುವುದು, ಎಳ್ಳಿನ ದಾನ ಹಾಗೂ ಎಳ್ಳಿನ ಸೇವನೆ ಬಹಳ ಶ್ರೇಯಸ್ಕರವೆಂದೂ ಅದರಲ್ಲಿ ಬರೆದಿದ್ದಾರೆ. ಎಳ್ಳು ಬಹಳ ಪುರಾತನ ಕಾಲದಿಂದಲೂ ಪುಣ್ಯಕಾರ್ಯಗಳಿಗೆ ಉಪಯೋಗಿಸುತ್ತ ಬಂದಿರುವ ಧಾನ್ಯ. ಶಿವನು ಗೋಸವವೆಂಬ ಯಜ್ಞವನ್ನು ಮಾಡಿದ ನಂತರ ಎಲ್ಲ ಮಾನವರ ತೃಪ್ತಿಗಾಗಿ ಮಕರ ಸಂಕ್ರಾಂತಿಯ ದಿನ ದಂದು ಎಳ್ಳನ್ನು ಸೃಷ್ಟಿಸಿ ಅದರ ಆರು ವಿಧದ ಉಪಯೋಗವನ್ನು ಉಪದೇಶಿಸಿದನೆಂಬುದಾಗಿ 'ಶಿವರಹಸ್ಯ' ದಲ್ಲಿ ಉಲ್ಲೇಖಿಸಿದೆ. 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡು' ಎಂಬ ನಾಣ್ಣುಡಿಯೂ ಈ ಹಬ್ಬದ ಕಾರಣದಿಂದಲೇ ಹುಟ್ಟಿದೆ.

ಮನೆಯಲ್ಲಿ ಮಕ್ಕಳಿಗೆ ಅಭ್ಯಂಜನ ಮಾಡಿಸಿ ತಲೆಯ ಮೇಲೆ ಭೋಗಿ ಹಣ್ಣು (ಬೋರೆ ಹಣ್ಣು), ಕಬ್ಬು ಮೊದಲಾದವುಗಳನ್ನು ಎರೆದು ಆರತಿ ಮಾಡುವ ಸಂಪ್ರದಾಯವಿದೆ. ಈ ದಿನ ಕೆಲವು ಹಳ್ಳಿಗಳಲ್ಲಿ ಜಾನುವಾರುಗಳ ದೃಷ್ಟಿದೋಷ ನಿವಾರಣೆಗಾಗಿ ಎತ್ತು, ಎಮ್ಮೆಗಳ ಕೋಡುಗಳಿಗೆ, ಮೈಗೆ ಬಣ್ಣ ಬಳಿದು ಅಲಂಕರಿಸಿ ಬೆಂಕಿಯ ಮೇಲೆ ಓಡಿಸುವುದುಂಟು. ಕೆಲವೆಡೆ ದೇವಸ್ಥಾನಗಳಲ್ಲಿ ದೇವರ ಮುಂದೆ ಮೊಲಕ್ಕೆ ಅರಿಸಿನ–ಕುಂಕುಮ ಬಳಿದು ಹೂವು ಮುಡಿಸಿ, ಪೂಜೆ ಮಾಡಿ ಬಿಡುವ ಪದ್ಧತಿಯೂ ಇದೆ. ಎಲ್ಲ ಪರ್ವಕಾಲಗಳೂ ಆಧ್ಯಾತ್ಮಿಕ ಸಾಧನೆಗೆ ಪ್ರಶಸ್ತವಾಗಿರುವುವಂಥವೇ. ಆಯಾ ದಿನಗಳಲ್ಲಿ ಏನೇನು ಕಾರ್ಯಗಳನ್ನು ಒಬ್ಬ ಮನುಷ್ಯ ಮಾಡುತ್ತಾನೋ, ಅವು ಅನಂತ ಫಲವನ್ನು ಕೊಡುತ್ತವೆ ಎಂಬ ನಂಬಿಕೆ ಇದೆ. ಹೀಗಾಗಿ ಸಾಧ್ಯವಾದಷ್ಟು ಹೆಚ್ಚು ಜಪ, ಪೂಜೆ, ಪ್ರಾರ್ಥನೆ, ಧ್ಯಾನಗಳಲ್ಲಿ ಈ ಪರ್ವಕಾಲವನ್ನು ನಾವು ಕಳೆಯುವುದು ಶ್ರೇಯಸ್ಕರ.

**ವಿವಿಧ ರಾಜ್ಯಗಳಲ್ಲಿ ಸಂಕ್ರಾಂತಿ :** ಉತ್ತರಪ್ರದೇಶದಲ್ಲಿ ಮಕರಸಂಕ್ರಾಂತಿಯನ್ನು 'ಖಿಚಿರಿ' ಎಂದೂ ಕರೆಯುತ್ತಾರೆ. ಅಲಹಾಬಾದಿನಲ್ಲಿ ಒಂದು ತಿಂಗಳ ಮಾಘಮೇಳ ಆರಂಭವಾಗುವುದು ಈ ದಿನದಿಂದಲೇ. ಪ್ರತಿವರ್ಷವೂ ಪಶ್ಚಿಮಬಂಗಾಳ ರಾಜ್ಯದ ಗಂಗಾಸಾಗರದಲ್ಲಿ ಈ ದಿನ ಬಹು ದೊಡ್ಡ ಮೇಳ ನಡೆದುಕೊಂಡು ಬರುತ್ತಿದ್ದು, ದೇಶದೆಲ್ಲೆಡೆಗಳಿಂದ ಜನರ ಸಾಗರವೇ ಬಂದು ಸೇರುತ್ತದೆ. ತಮಿಳುನಾಡಿನಲ್ಲಿ ಸಂಕ್ರಾಂತಿಯನ್ನು 'ಪೊಂಗಲ್' ಎಂಬುದಾಗಿ ಆಚರಿಸುತ್ತಾರೆ. ಸುಗ್ಗಿಯ ಕಟಾವಿನ ನಂತರ ಅಕ್ಕಿಯನ್ನು ಹಾಲು, ಬೆಲ್ಲದೊಂದಿಗೆ ಬೇಯಿಸಿ ಮಾಡುವ ಖಾದ್ಯದಿಂದಲೇ ಈ ಹಬ್ಬಕ್ಕೆ ಆ ಹೆಸರು ಬಂದಿರಬಹುದು. 'ಪೊಂಗಲ್' ಅನ್ನುವುದು 'ಅದು ಬೇಯುತ್ತಿದೆಯೆ?' ಎಂಬ ಅರ್ಥವನ್ನು ಹೇಳುತ್ತದೆ ಎಂದು ಪ್ರೊ. ಪಿ.ವಿ.ಕಾಣೆಯವರು ಬರೆಯುತ್ತಾರೆ. ಇದು ತಮಿಳುನಾಡಿನ ಜನಕ್ಕೆ ಅತ್ಯಂತ ದೊಡ್ಡ ಹಬ್ಬ. ಆಂಧ್ರದಲ್ಲಿ ಈ ಹಬ್ಬವನ್ನು ನಾಲ್ಕು ದಿನಗಳ ಕಾಲ ಆಚರಿಸುತ್ತಾರೆ. ಅವರಿಗೆ ಇದು 'ಪೆದ್ದ ಪಂಡುಗ' (ದೊಡ್ಡ ಹಬ್ಬ). ಮೊದಲ ದಿನವನ್ನು 'ಭೋಗಿ'ಯೆಂದೂ, ಎರಡನೇ ದಿನವನ್ನು 'ಸಂಕ್ರಾಂತಿ'ಯೆಂದೂ, ಮೂರನೇ ದಿನವನ್ನು 'ಕನುಮ' ವೆಂದೂ, ನಾಲ್ಕನೆಯ ದಿನವನ್ನು 'ಮುಕ್ಕನುಮ'ವೆಂದೂ ಆಚರಿಸುತ್ತಾರೆ. ಮಹಾರಾಷ್ಟ್ರ ಹಾಗೂ ಗುಜರಾತುಗಳಲ್ಲಿಯೂ ಈ ಹಬ್ಬವನ್ನು ಆಚರಿಸುತ್ತಾರೆ. ಗುಜರಾತಿನಲ್ಲಿ ಮನೆಯ ಹಿರಿಯರು ಕಿರಿಯರಿಗೆ ಉಡುಗೊರೆಗಳನ್ನು ಕೊಡುವ ಸಂಪ್ರದಾಯವಿದೆ. ಗುಜರಾತಿ ಪಂಡಿತರು ತಮ್ಮ ಶಿಷ್ಯರಿಗೆ ಜ್ಯೋತಿಷ ಹಾಗೂ ತತ್ತ್ವಶಾಸ್ತ್ರಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನವನ್ನು ಈ ದಿನದಂದೇ ನೀಡುವರು. ಈ ಸಮಯದಲ್ಲಿ ಗಾಳಿಪಟ ಹಾರಿಬಿಡುವ ಸಂಪ್ರದಾಯ ಗುಜರಾತಿನಲ್ಲಿ ಬಹಳ ಪ್ರಸಿದ್ಧ.

ಪಂಜಾಬಿನ ಜನರು ಸಂಕ್ರಾಂತಿಯ ಹಿಂದಿನ ದಿನವನ್ನು 'ಲೋಹಿರಿ' ಎಂದೂ, ಸಂಕ್ರಾಂತಿಯ ದಿನವನ್ನು 'ಮಾಘಿ' ಎಂದೂ ಕರೆದು ಆಚರಿಸುವರು. ದೊಡ್ಡ ಬೆಂಕಿಯನ್ನು ಹೊತ್ತಿಸಿ ಅದರ ಸುತ್ತಲೂ ಬಂಧುಗಳು, ಸ್ನೇಹಿತರೊಂದಿಗೆ ಸೇರಿ ಬೆಂಕಿಗೆ ಕಬ್ಬು, ಅಕ್ಕಿ ಹಾಗೂ ಸಿಹಿತಿನಿಸುಗಳನ್ನು ಹಾಕಿ, 'ಭಾಂಗ್ಡಾ' ನೃತ್ಯವನ್ನು ಮಾಡಿ, ನಂತರ ಎಲ್ಲರೂ ಸೇರಿ ಭೋಜನ ಮಾಡುತ್ತಾರೆ. ಅಸ್ಸಾಂನಲ್ಲಿ ಇದನ್ನು 'ಭೋಗಲಿ ಬಿಹು' ಎಂದು ಆಚರಿಸುವರು. ಮಧ್ಯಪ್ರದೇಶ ಹಾಗೂ ಬುಂದೇಲ್‌ಖಂಡಗಳ ಜನರು ಈ ಹಬ್ಬವನ್ನು 'ಸಕರತ್' ಎಂಬುದಾಗಿ ಬಹಳ ಸಡಗರದಿಂದ ತಮ್ಮದೇ ಆದ ಶೈಲಿಯಲ್ಲಿ ಆಚರಿಸುತ್ತಾರೆ. ಒರಿಸ್ಸಾದ ಭುಯಾ ಬುಡಕಟ್ಟು ಜನಾಂಗದವರು ಈ ದಿನವನ್ನು 'ಮಾಘಯಾತ್ರೆ'ಯನ್ನಾಗಿ ಆಚರಿಸುತ್ತಾರೆ. ಅಂದು ತಾವೇ ಮನೆಗಳಲ್ಲಿ ತಯಾರಿಸಿದ ಕೈಮಗ್ಗದ ವಸ್ತುಗಳನ್ನು ಮಾರಾಟಕ್ಕೆಂದು ಇಡುತ್ತಾರೆ. ತೀರಪ್ರದೇಶಗಳಲ್ಲಿ, ಸುಗ್ಗಿಯ ಕಾಲವಾದ ಇದನ್ನು ಇಂದ್ರದೇವತೆಗೆ ಪೂಜೆ ಮಾಡುವುದರೊಂದಿಗೆ ಆಚರಿಸುತ್ತಾರೆ. ❐

# ಹಬ್ಬಗಳನ್ನು ಅರಿತು ಆಚರಿಸೋಣ.

ಡಾ. ಕೆ. ಜಗದೀಶ ಪೈ

**ನಮ್ಮ ದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗ ಹಬ್ಬಹರಿದಿನಗಳು. ಅವುಗಳ ಧಾರ್ಮಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯನ್ನು ಅರಿತು ಆಚರಿಸಿದರೆ ಅವು ನಿಜವಾಗಿಯೂ ಅರ್ಥಪೂರ್ಣವಾಗುತ್ತವೆ; ಮನಸ್ಸಿಗೆ ಉಲ್ಲಾಸದ ಜೊತೆಗೆ ಭಕ್ತಿಭಾವವನ್ನೂ ಮೂಡಿಸುತ್ತವೆ. ಇದನ್ನು ಅನೇಕ ಮಾಹಿತಿಗಳ ಮುಖಾಂತರ ವಿವರಿಸಿರುವ ಲೇಖಕರು ಕಾರ್ಕಳದಲ್ಲಿ ವೈದ್ಯವೃತ್ತಿಯನ್ನು ನಡೆಸುತ್ತಿದ್ದಾರೆ. ವ್ಯಕ್ತಿತ್ವವಿಕಸನದ ಬಗೆಗಿನ ಇವರ ಲೇಖನಗಳು 'ಉತ್ಥಾನ' ಪತ್ರಿಕೆಯಲ್ಲಿ ಪ್ರತಿತಿಂಗಳೂ ಪ್ರಕಟವಾಗುತ್ತಿವೆ.**

ನಮ್ಮ ದೇಶ ಹಬ್ಬಗಳ ದೇಶ. ಈ ದೇಶದಲ್ಲಿ ಆಚರಿಸುವಷ್ಟು ಹಬ್ಬಗಳನ್ನು ಬೇರೆ ಯಾವ ದೇಶದಲ್ಲೂ ಆಚರಿಸುವುದಿಲ್ಲ. ಹೇಮಾದ್ರಿ ಪಂಡಿತರೆಂಬ ಮಹನೀಯರೋರ್ವರು ಒಂದು ವರ್ಷದಲ್ಲಿ ಆಚರಿಸಬಹುದಾದ ೩,೦೦೦ ವ್ರತ ಹಾಗೂ ಹಬ್ಬಗಳ ವಿಸ್ತಾರವಾದ ಪಟ್ಟಿಯೊಂದನ್ನು ತಮ್ಮ 'ವ್ರತಚಿಂತಾಮಣಿ' ಎಂಬ ಪುಸ್ತಕದಲ್ಲಿ ನೀಡಿದ್ದಾರೆ. ಸರಾಸರಿ ಲೆಕ್ಕದಲ್ಲಿ ಹೇಳಬೇಕಾದರೆ ನಮ್ಮಲ್ಲಿ ದಿನನಿತ್ಯವೂ ೭–೮ ಹಬ್ಬ, ವ್ರತಗಳಿವೆ. ಹಿಂದೂ ಧರ್ಮದಲ್ಲಿರುವಷ್ಟು ಹಬ್ಬಗಳು ಬೇರೆ ಯಾವ ಧರ್ಮದಲ್ಲೂ ಇಲ್ಲ. ಯುಗಾದಿ, ಅಕ್ಷಯತದಿಗೆ, ಗುರು ಪೂರ್ಣಿಮೆ, ರಕ್ಷಾಬಂಧನ, ನಾಗರಪಂಚಮಿ, ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ, ಮಕರಸಂಕ್ರಾಂತಿ, ಮಹಾಶಿವರಾತ್ರಿ – ಹೀಗೆ ನೂರಾರು ಹಬ್ಬಹರಿದಿನಗಳು ನಮ್ಮಲ್ಲಿ ಆಚರಣೆಯಲ್ಲಿವೆ. ಇದರೊಂದಿಗೆ ಅವರವರ ಊರಿನ ಪ್ರಸಿದ್ಧ ದೇವಸ್ಥಾನದ ಸ್ಥಳೀಯ ಜಾತ್ರೆಗಳೂ ಇವೆ.



ನಮ್ಮ ಉತ್ಸವದ ವಿಶೇಷತೆಯೆಂದರೆ ಯಾವ ಹಬ್ಬವೂ ಶೋಕಸೂಚಕವಲ್ಲ, ದುಃಖದಾಯಕವಲ್ಲ. ಆದರೆ ಬೇರೆ ಧರ್ಮದಲ್ಲಿ ದುಃಖದಾಯಕವಾದ ಕೆಲವು ಹಬ್ಬಗಳು ಇವೆ. ಆದರೆ ನಮ್ಮ ಸಾವಿರಾರು ಉತ್ಸವಗಳಲ್ಲಿ ಯಾವುದೂ ದುಃಖ ದಾಯಕವಲ್ಲ. ಬದಲಿಗೆ ಅವೆಲ್ಲವೂ ಶುಭದಾಯಕವಾದುವು, ಶುಭಸೂಚಕವಾದುವು. ಉತ್ಸವವನ್ನು ಆಚರಿಸುವ ಉದ್ದೇಶ ಏನು? ನಮ್ಮ ನಿತ್ಯಜೀವನದ ಜಂಜಾಟದಿಂದ, ಯಾಂತ್ರಿಕ ಜೀವನದಿಂದ ವಿಮುಖರಾಗಿ ಉಲ್ಲಾಸ ಸಿಗಬೇಕು ಎಂಬ ದೃಷ್ಟಿ. ಇದು ನಮ್ಮ ಹಿರಿಯರ ದೃಷ್ಟಿ ಕೂಡ. ಕವಿ ಕಾಳಿದಾಸ ಹೇಳಿದ ಹಾಗೆ, **ಉತ್ಸವಪ್ರಿಯಾಃ ಖಲು ಮನುಷ್ಯಾಃ** – 'ಮನುಷ್ಯರೆಲ್ಲ ಉತ್ಸವಪ್ರಿಯರು'. ಹಬ್ಬವೆಂದರೆ ಅದು ಮಾನವರಿಗೆಲ್ಲ ಚೈತನ್ಯದ ಚಿಲುಮೆ; ಉತ್ಸಾಹದ ಕಾರಂಜಿ.

ಆದರೆ ಈ ನಮ್ಮ ಹಬ್ಬಗಳನ್ನು ಸಂಪ್ರದಾಯಗಳನ್ನು ವಿಧರ್ಮೀಯರು, ವಿದೇಶೀಯರು ಸದಾ ಗೇಲಿ ಮಾಡುತ್ತಾರೆ, "ನೀವು ವಿಷಜಂತುವಾದ ನಾಗರಹಾವಿಗೆ ನಾಗರಪಂಚಮಿಯಂದು ಹಾಲೆರೆಯುತ್ತೀರಿ. ಅರ್ಧ ಆನೆ, ಅರ್ಧ ಮನುಷ್ಯಾಕೃತಿಯಾದ ಗಣೇಶನನ್ನು ಪೂಜಿಸುತ್ತೀರಿ" ಎಂದು. ಇದೆಲ್ಲ ಮೌಢ್ಯದ ಸಂಕೇತ, ಅರ್ಥವಿಲ್ಲದ ಆಚರಣೆಗಳು ಎಂಬ ಆಪಾದನೆಗಳೂ ಕೇಳಿಬರುತ್ತಿವೆ. ಆದರೆ ನಮ್ಮೆಲ್ಲ ಹಬ್ಬಗಳ ಆಚರಣೆ ಅರ್ಥಪೂರ್ಣವಾಗಿವೆ, ಸತ್ವಪೂರ್ಣವಾಗಿವೆ. ಅದರಲ್ಲಿ ಸಾಕಷ್ಟು ವೈಚಾರಿಕತೆ ಇದೆ, ವೈಜ್ಞಾನಿಕತೆಯೂ ಇದೆ. ಆದರೆ ಅದನ್ನು ಅರ್ಥಮಾಡಿಕೊಳ್ಳುವ ತೆರೆದ ಮನಸ್ಸು ಇರಬೇಕು, ಅಷ್ಟೇ. ನಾವು ಆಚರಿಸುವ ಹಬ್ಬಗಳಿಗೆ ಮುಖ್ಯವಾಗಿ ನಾಲ್ಕು ಮುಖಗಳಿವೆ: ಒಂದು **ಪೌರಾಣಿಕ**, ಇನ್ನೊಂದು **ಆಧ್ಯಾತ್ಮಿಕ**, ಮತ್ತೊಂದು **ಆಚರಣೆ**, ಮಗದೊಂದು **ವೈಜ್ಞಾನಿಕ.**

## ಕೃಷ್ಣಜನ್ಮಾಷ್ಟಮಿ

ಉದಾಹರಣೆಗೆ ಶ್ರೀಕೃಷ್ಣಜನ್ಮಾಷ್ಟಮಿ. ಇಲ್ಲಿ ಶ್ರೀಕೃಷ್ಣನ ಬಾಲಲೀಲೆ, ಕಂಸವಧೆಯ ಕತೆ – ಇವು ಪೌರಾಣಿಕ ಮುಖದಲ್ಲಿ ಅನಾವರಣಗೊಂಡರೆ, 'ದುಷ್ಟರ ದಮನ-ಶಿಷ್ಟರ ರಕ್ಷಣೆ' ಎನ್ನುವುದು ಆಧ್ಯಾತ್ಮಿಕ ಅರ್ಥದಲ್ಲಿ ಮಹತ್ವ ಪಡೆಯುತ್ತದೆ. ಅಷ್ಟಮಿಯ ಉಪವಾಸ, ಪೂಜೆ, ಉಂಡೆ-ಚಕ್ಕುಲಿ-ಮೊಸರು ಕುಡಿಕೆ ಎಲ್ಲವೂ ಆಚರಣೆಯ ಮುಖದಲ್ಲಿ ಕಾಣಿಸಿಕೊಳ್ಳುತ್ತವೆ. ರಾತ್ರಿ ಕೃಷ್ಣನ ಸಹಸ್ರನಾಮಾವಳಿಯನ್ನು ಪಠಿಸುತ್ತಾ, ಒಂದೊಂದು ಹೆಸರನ್ನು ಹೇಳುತ್ತಾ ತುಳಸೀದಳವನ್ನು ಕೃಷ್ಣನಿಗೆ ಅರ್ಪಿಸುವುದರಲ್ಲಿ ವೈಜ್ಞಾನಿಕತೆ ಅಡಗಿದೆ. ತುಳಸಿಯಲ್ಲಿ ಉತ್ಕೃಷ್ಟವಾದ ಔಷಧಿಗುಣವಿದೆ. ಆಮ್ಲಪಿತ್ತ, ಕಾಮಾಲೆ, ಕ್ಷಯರೋಗ, ಕೆಮ್ಮು, ದಮ್ಮು, ನೆಗಡಿ, ಮಧುಮೇಹ, ರಕ್ತದೊತ್ತಡ, ಬೊಜ್ಜು, ಚರ್ಮದ ರೋಗಗಳು ಮುಂತಾದ ಹಲವು ಕಾಯಿಲೆಗಳನ್ನು ಹೋಗಲಾಡಿಸುವ ಶಕ್ತಿ, ಸಾಮರ್ಥ್ಯ ತುಳಸಿಯಲ್ಲಿದೆ ಎಂಬುದಾಗಿ ಇಂದು ವೈಜ್ಞಾನಿಕವಾಗಿ ರುಜುವಾತಾಗಿದೆ. ಅಷ್ಟು ಮಾತ್ರವಲ್ಲದೆ ತುಳಸಿಯು ಸುತ್ತಲಿನ ಪರಿಸರದಲ್ಲಿರುವ ಕ್ರಿಮಿಕೀಟಗಳನ್ನು ದೂರಗೊಳಿಸುತ್ತದೆ. ಹೀಗೆ ತುಳಸಿಯ ಉಪಯೋಗದಿಂದ ನಮ್ಮ ಆರೋಗ್ಯ ಸದೃಢವಾಗಲಿ ಎಂಬ ಆಶಯ ಕೃಷ್ಣಜನ್ಮಾಷ್ಟಮಿಯ ಈ ಆಚರಣೆಯಲ್ಲಡಗಿದೆ.

## ದೀಪಾವಳಿ

ಅದೇ ರೀತಿ ದೀಪಾವಳಿ. ಈ ಹಬ್ಬದ ದಿನಗಳಲ್ಲಿ ಎಲ್ಲೆಲ್ಲೂ ದೀಪಗಳ ಸಾಲು; ಮನ-ಮನೆಗಳಲ್ಲೂ ದೀಪೋತ್ಸವ. ಶರತ್ಕಾಲದ ಶುಭ್ರ ಆಕಾಶದಲ್ಲಿ ದೀಪದ ಬುಟ್ಟಿ, ಆಕಾಶದೀಪ; ಗೂಡುದೀಪ. ಹಟ್ಟಿಯಲ್ಲೊಂದು ದೀಪ; ಕಣಜದ ಎದುರು ಒಂದು ದೀಪ; ಗದ್ದೆಗೊಂದು ದೀಪ – ಹೀಗೆ ದೀಪಗಳ ಸಾಲನ್ನೇ ನಾವು 'ದೀಪಾವಳಿ' ಎಂದು ಕರೆಯುವುದು. ಕೃಷಿಕಾರ್ಯಗಳಿಗೆ ನೆರವಾದ ಎತ್ತುಗಳಿಗೆ, ಜಾನುವಾರುಗಳಿಗೆ, ಕಣಜ ತುಂಬಲು ಕಾರಣಳಾದ ಧಾನ್ಯಲಕ್ಷ್ಮಿಗೆ, ಫಸಲು ನೀಡಿದ ಭೂತಾಯಿಗೆ – ಹೀಗೆ ಎಲ್ಲರಿಗೂ ಕೃತಜ್ಞತಾಪೂರ್ಣ, ಗೌರವಪೂರ್ಣ ನಮನ ಸಲ್ಲಿಸುವ ಹೃದಯವಂತಿಕೆಯ ಆಚರಣೆ ಈ ಹಬ್ಬದಲ್ಲಿದೆ.

ದೀಪವು ಜ್ಞಾನದ ಪ್ರತೀಕವೂ ಹೌದು. ಏಕೆಂದರೆ ಅಜ್ಞಾನದ ಸಂಕೇತವಾದ ಕತ್ತಲನ್ನು ಬಡಿದೋಡಿಸುವ ಸಾಮರ್ಥ್ಯ ಅದಕ್ಕಿದೆ. **ತಮಸೋ ಮಾ ಜ್ಯೋತಿರ್ಗಮಯ** – ಈ ಶಾಂತಿಮಂತ್ರದ ಮೂಲಕ "'ನಮ್ಮನ್ನು ಕತ್ತಲಿನಿಂದ ಬೆಳಕಿನಡೆಗೆ ಕರೆದುಕೊಂಡು ಹೋಗು" ಎಂದು ನಾವು ದಿನನಿತ್ಯ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. ಹೀಗೆ ಬೆಳಕಿನ ಆರಾಧನೆಯೇ ದೀಪಾವಳಿ ಹಬ್ಬ.

ಕತ್ತಲೆಯ, ತಮಸ್ಸಿನ ಪ್ರತಿನಿಧಿಯಾದ ನರಕಾಸುರನನ್ನು ಶ್ರೀಕೃಷ್ಣ ತನ್ನ ಜ್ಞಾನದ ಪ್ರತೀಕವಾದ ಸುದರ್ಶನ ಚಕ್ರದಿಂದ ಕೊಂದನು. ಹೀಗೆ ನಮ್ಮ ಬಾಳಿನಲ್ಲಿ ಅಜ್ಞಾನದ ಅಂಧಕಾರವನ್ನು ಜ್ಞಾನದ ಬೆಳಕಿನಿಂದ ದೂರಗೊಳಿಸಬೇಕೆಂಬ ಸಂದೇಶ ದೀಪಾವಳಿ ಹಬ್ಬದಲ್ಲಡಗಿದೆ. ಶ್ರೀಕೃಷ್ಣ ನರಕಾಸುರನನ್ನು ಮಧ್ಯರಾತ್ರಿ ಕೊಂದು ಬೆಳಗಿನ ಜಾವ ಮನೆಗೆ ಬಂದ; ಸುಖವಾಗಿ ಅಭ್ಯಂಜನ ಸ್ನಾನ ಮಾಡಿದ. ಅಂದರೆ ನಮ್ಮ ನಿತ್ಯಕರ್ಮದಲ್ಲಿ ದಿನಾಲೂ ಬೆಳಿಗ್ಗೆ ಸ್ನಾನ ಮಾಡುವುದು ದೇಹಕ್ಕೆ ಒಳ್ಳೆಯದು, ಅದೂ ಅಭ್ಯಂಜನಸ್ನಾನ ಆರೋಗ್ಯದ ದೃಷ್ಟಿಯಿಂದ ಉತ್ತಮ ಎಂದು ಆಯುರ್ವೇದ ವೈದ್ಯಶಾಸ್ತ್ರ ಹೇಳುತ್ತದೆ.

ದೀಪಾವಳಿ ಸಮಯದಲ್ಲಿ ನಾವು ಪಟಾಕಿ, ಸುಡುಮದ್ದುಗಳನ್ನು ಸುಡುತ್ತೇವೆ. ಆ ಸಮಯದಲ್ಲಿ ರೈತರು ಬೆಳೆಸಿದ ಬೆಳೆಗಳಿಗೆ ಹಾನಿ ಮಾಡುವ ಕ್ರಿಮಿಕೀಟಗಳು ವಾತಾವರಣದಲ್ಲಿ ವಿಪುಲವಾಗಿರುತ್ತವೆ. ಪಟಾಕಿಯಿಂದ, ಸುಡುಮದ್ದಿನಿಂದ ಇಂತಹ ಕ್ರಿಮಿಕೀಟಗಳು ನಾಶವಾಗುತ್ತವೆ. ಹೀಗೆ ನಮ್ಮ ಪ್ರತಿಯೊಂದು ಹಬ್ಬದಲ್ಲೂ ಆಧ್ಯಾತ್ಮಿಕತೆ, ವೈಚಾರಿಕತೆ ಹಾಗೂ ವೈಜ್ಞಾನಿಕತೆ – ಈ ಮೂರೂ ಕೂಡಿಕೊಂಡಿವೆ.

## ಗಣಪತಿ ಹಬ್ಬ

ಗಣೇಶನ ಹಬ್ಬದಲ್ಲೂ ಇಂತಹ ವಿಶೇಷತೆಗಳು ಅಡಗಿಕೊಂಡಿವೆ. ವಿನಾಯಕನೆಂದೂ ಪ್ರಸಿದ್ಧನಾದ ಗಣಪತಿ ಎಲ್ಲ ಹಿಂದುಗಳಿಗೂ ಪ್ರಿಯನಾದ ಜನಪ್ರಿಯ ದೇವತೆ. ಧಾರ್ಮಿಕವಾದ ಅಥವಾ ಲೌಕಿಕವಾದ ಯಾವ ಕಾರ್ಯವೇ ಆದರೂ ಗಣೇಶನ ಪೂಜೆ ಇಲ್ಲದೆ ಪ್ರಾರಂಭವಾಗುವುದಿಲ್ಲ. ಆದರೆ ಅನೇಕರಿಗೆ ಈ ಗಣೇಶನ ವಿಕಟರೂಪವು ಸಹ್ಯವಾಗುವುದಿಲ್ಲ, ಅರ್ಥವೂ ಆಗುವುದಿಲ್ಲ. ಆದರೆ ಗಣೇಶನ ಸಂಕೇತವನ್ನು ಆಳವಾಗಿ ಚಿಂತನೆ ಮಾಡಿದರೆ ನಮ್ಮ ತಿರಸ್ಕಾರವು ಗೌರವಭಾವವಾಗಿ, ಪೂಜ್ಯಭಾವವಾಗಿ ಮಾರ್ಪಡುತ್ತದೆ.

'ಗಣ' ಅಂದರೆ ತತ್ತ್ವ. ಯಾವ ಮೂಲತತ್ತ್ವದಿಂದ ಎಲ್ಲ ತತ್ತ್ವಗಳೂ ಆವಿಷ್ಕಾರಗೊಳ್ಳುವವೊ ಅವನೇ ಗಣಪತಿ. ಅಂದರೆ ವಿಶ್ವಕ್ಕೆ ಮೂಲಕಾರಣನಾದ ಪರಮಾತ್ಮನೆಂದೇ ಅರ್ಥ. ಆನೆಯ ಮುಖವಿರುವುದರಿಂದ ಗಣೇಶನು 'ಗಜಮುಖ'ನಾಗಿದ್ದಾನೆ. ಆದರೆ 'ಗಜ' ಅಂದರೆ ಬರಿ ಆನೆ ಅಂತ ಅರ್ಥ ಅಲ್ಲ. ಇನ್ನೂ ಆಳವಾದ ಅರ್ಥ ಉಂಟು. 'ಗ' ಅಂದರೆ ಗತಿ. 'ಜ' ಅಂದರೆ ಜನ್ಮ. ಆದ್ದರಿಂದ 'ಗಜ' ಎಂದರೆ ಯಾರಿಂದ ಈ ವಿಶ್ವವು ಹುಟ್ಟಿದೆಯೋ, ಯಾವುದರ ಕಡೆಗೆ ಸಾಗುತ್ತಿರುವುದೊ, ಯಾರಲ್ಲಿ ವಿಲೀನವಾಗುವುದೋ ಅಂತಹ ಪರಮಾತ್ಮನೆಂದರ್ಥ.

ಸೃಷ್ಟಿಯಲ್ಲಿ ಸೂಕ್ಷ್ಮಾಂಡ ಹಾಗೂ ಬ್ರಹ್ಮಾಂಡಗಳೆಂಬ ಎರಡು ಬಗೆಯುಂಟು. ಇವೆರಡರಲ್ಲಿ ಒಂದು ಇನ್ನೊಂದರ ಪ್ರತಿರೂಪವಾಗಿದೆ. ಇವು ಎರಡು ರೂಪಗಳಲ್ಲಿರುವ ಒಂದೇ ತತ್ತ್ವವಾಗಿದೆ. ಗಜಮುಖವು ಬ್ರಹ್ಮಾಂಡದ ಪ್ರತೀಕ. ಮಾನವ ಶರೀರವು ಸೂಕ್ಷ್ಮಾಂಡದ ಪ್ರತೀಕ. ಗಣಪತಿಯಲ್ಲಿ ಅವೆರಡೂ ಕೂಡಿ ಒಂದೇ ವ್ಯಕ್ತಿಯಾಗಿದೆ. ಸೂಕ್ಷ್ಮಾಂಡದ ಗುರಿ ಬ್ರಹ್ಮಾಂಡವಾಗಿರುವುದರಿಂದ, ಗಜಭಾಗವನ್ನು ಶಿರೋಭಾಗವನ್ನಾಗಿ ಮಾಡಿ ಹೆಚ್ಚಿನ ಮಹತ್ತ್ವ ಕೊಡಲಾಗಿದೆ. ಗಜಮುಖವೇ ವಿಶ್ವ, ಮಾನವಾಕಾರವೇ ವ್ಯಕ್ತಿ. ಅವೆರಡೂ ಒಂದು ಎಂಬುದನ್ನೇ ಗಜಮುಖ ಮತ್ತು ಮಾನವಶರೀರ – ಇವೆರಡೂ ಸೇರಿ ಒಂದು ವಿಗ್ರಹವಾಗಿರುವುದು ಸೂಚಿಸುತ್ತದೆ.

ಗಣಪತಿಯ ಆನೆತಲೆಯು ಬುದ್ಧಿಶಕ್ತಿಯನ್ನೂ, ಪುಟ್ಟ ಕಣ್ಣುಗಳು ತೀಕ್ಷ್ಣ ಹಾಗೂ ಸೂಕ್ಷ್ಮ ದೃಷ್ಟಿಯನ್ನೂ, ಅಗಲ ವಾದ ಕಿವಿಯು ಸಕಲವನ್ನೂ ಕೇಳಿಸಿಕೊಳ್ಳುವ ಗ್ರಾಹ್ಯಶಕ್ತಿಯನ್ನೂ, ಏಕದಂತವು ಐಕ್ಯಮತ್ಯವನ್ನೂ, ಮುರಿದ ದಂತವು ದುಷ್ಟದಮನವನ್ನೂ ಸೂಚಿಸುತ್ತವೆ. ಗಣಪತಿಗೆ ಅತ್ಯಂತ ಪ್ರಿಯವಾದ ಮೋದಕದ ಹೊರ ಆವರಣವು ಅಹಂಕಾರ ವನ್ನೂ, ಅದನ್ನು ಒಡೆದಾಗ ಒಳಗಿರುವ ಸಿಹಿ ಹೂರಣವು ಅಹಂಕಾರವನ್ನು ತೊಡೆದ ಸಾತ್ವಿಕ ಗುಣವನ್ನೂ ಸಾರುತ್ತದೆ. ಸೊಂಡಿಲು ಓಂಕಾರದ ಸಂಕೇತ. ದೊಡ್ಡ ಹೊಟ್ಟೆಯು ಆತನ ಉದರದಲ್ಲಿ ಸಮಸ್ತ ಬ್ರಹ್ಮಾಂಡಗಳೂ ಉಂಟೆಂದು ಸೂಚಿಸುತ್ತದೆ. ಹೊಟ್ಟೆಗೆ ಸುತ್ತಿ ಬಿಗಿದ ಸರ್ಪವು ವಿಶ್ವವನ್ನು ಕಕ್ಷೆಯಲ್ಲಿ ನೆಲೆಗೊಳಿಸಿದ ಸಂಕರ್ಷಣ ಶಕ್ತಿ ಹಾಗೂ ಕಾಲಶಕ್ತಿಯ ಸಂಕೇತವೂ ಆಗಿದೆ. ಇಲಿಯು ಚಂಚಲತೆಯನ್ನು ಹೊಂದಿರುವ ಪ್ರಾಣಿಯಾದ್ದರಿಂದ ಗಣಪತಿಯು ಅದನ್ನು ಅಂಕೆಯಲ್ಲಿಟ್ಟುಕೊಂಡು ವಾಹನವನ್ನಾಗಿಸಿಕೊಂಡಿದ್ದಾನೆ. ನಾಲ್ಕು ಕೈಗಳಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಗಳೆಂಬ ಪುರುಷಾರ್ಥಗಳ ನಿಯಂತ್ರಣದ ಸಂಕೇತವಾಗಿ ಪಾಶ, ಅಂಕುಶ, ವಕ್ರದಂತ ಮತ್ತು ಅಭಯ ಮುದ್ರೆಯನ್ನು ಹೊಂದಿದ್ದಾನೆ. ಇನ್ನು ಗಣೇಶನಿಗೆ ಅತಿಪ್ರಿಯವಾದ ಗರಿಕೆ ಹುಲ್ಲಿನ ಕುಡಿಯು ಸರಳತೆ ಹಾಗೂ ನಮ್ರತೆಯ ಕುರುಹಾಗಿದೆ. ಹೀಗೆ ಸಿದ್ಧಿ ಬುದ್ಧಿಗಳ ಅಧಿದೇವತೆಯಾದ, ವಿಘ್ನಕಾರಕನೂ ವಿಘ್ನನಿವಾರಕನೂ ಆದ ವಿಘ್ನೇಶ್ವರನಿಗೆ ಶರಣಾಗತನಾದರೆ, ನಮ್ಮೆಲ್ಲ ದುಃಖಗಳೂ, ಕಷ್ಟಗಳೂ, ಸಂಕಟಗಳೂ ದೂರವಾಗಿ ನಮಗೆಲ್ಲರಿಗೂ ಶುಭವಾಗುತ್ತದೆ. ಗಣೇಶನು ವಿಘ್ನೇಶನಾಗಿರುವುದರಿಂದ ಆತನಿಗೆ ಪ್ರಥಮವಾಗಿ ಪೂಜೆ ಮಾಡುವ ಸಂಪ್ರದಾಯವು ಸಹಜವೇ ಆಗಿದೆ.

### ಯುಗಾದಿ

ವರ್ಷದ ಆರಂಭದ ಹಬ್ಬವಾದ ಯುಗಾದಿ ಅತ್ಯಂತ ವೈಜ್ಞಾನಿಕವಾದದ್ದು. ಯುಗಾದಿ ಅಂದರೆ ಸೃಷ್ಟಿಯ ಪ್ರಾರಂಭದ ದಿನ; ಯುಗದ ಆರಂಭದ ದಿನ. ಯುಗದ ಆರಂಭದ ದಿನವಾದ್ದರಿಂದ ಅದನ್ನು 'ಯುಗಾದಿ' ಎಂದು ಕರೆಯುತ್ತಾರೆ. ಅದಕ್ಕಾಗಿ ಹೆಚ್ಚು ಪ್ರಾಶಸ್ತ್ಯದ ಹಬ್ಬದ ದಿನವಾಗಿ ಇದನ್ನು ಆಚರಿಸುತ್ತೇವೆ.

ಒಂಬತ್ತು ಬಗೆಯ ಕಾಲಗಣನಾ ಪದ್ಧತಿಯನ್ನು ಖಗೋಳ ವೈಜ್ಞಾನಿಕ ರೀತಿಯಲ್ಲಿ ಭಾರತೀಯರು ಆವಿಷ್ಕರಿಸಿದ್ದಾರೆ. ಇವುಗಳ ಪೈಕಿ ಚಾಂದ್ರಮಾನ, ಸೌರಮಾನಗಳು ದೈನಂದಿನ ಬಳಕೆಯಲ್ಲಿ ಹೆಚ್ಚು ಪ್ರಚಲಿತದಲ್ಲಿವೆ. ಚಂದ್ರನ ಚಲನೆಯ ಆಧಾರದ ಮೇಲೆ ಮಾಡುವ ಕಾಲಗಣನೆಯನ್ನು ಚಾಂದ್ರಮಾನವೆಂತಲೂ, ಸೂರ್ಯಕೇಂದ್ರಿತವಾದ ಭೂಮಿಯ ಚಲನೆಯ ಆಧಾರದ ಮೇಲೆ ಮಾಡುವ ಕಾಲಗಣನೆಯನ್ನು ಸೌರಮಾನವೆಂತಲೂ ಕರೆಯುತ್ತಾರೆ. ಹಿಂದು ಕಾಲ ಗಣನೆಗೂ, ವೈಜ್ಞಾನಿಕ ಕಾಲಗಣನೆಗೂ ಬಹಳ ಸಾಮ್ಯತೆ ಇದೆ.

ಹಿಂದೆ ರೋಮ್ ಗಣರಾಜ್ಯದ ಪಂಚಾಂಗದ ಪ್ರಕಾರ ಮಾರ್ಚ್ ಒಂದರಂದು ವರ್ಷಾರಂಭವಾಗುತ್ತಿತ್ತು. ಮಾರ್ಚ್‌ಗೆ ಹೊಸ ವರ್ಷ ಆರಂಭವಾದರೆ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಕ್ರಮವಾಗಿ ೭, ೮, ೯, ೧೦ನೇ ತಿಂಗಳುಗಳಾಗುತ್ತವೆ. ಆದರೆ ೧೩ನೇ ಪೋಪ್ ಆಗಿದ್ದ ಗ್ರೆಗರಿ ಎಂಬುವವರು "ಏಸುಕ್ರಿಸ್ತ ಇಡೀ ಜಗತ್ತಿಗೆ ದೊಡ್ಡ ವ್ಯಕ್ತಿ, ಮಹಾನ್‌ಪುರುಷ. ಆದ್ದರಿಂದ ಆತನ ಜನ್ಮದಿನದ ಆಧಾರದ ಮೇಲೆಯೇ ಹೊಸ ವರ್ಷ ಆರಂಭಿಸಬೇಕು" ಎಂಬುದಾಗಿ ಯೋಚಿಸಿದರು. ಆದ್ದರಿಂದ ಏಸುಕ್ರಿಸ್ತನ ಜನ್ಮದಿನವಾದ ಡಿಸೆಂಬರ್ ೨೫ ಮುಗಿದು ೬ ದಿನದಲ್ಲಿ ಬರುವ ಜನವರಿ ೧ ಅನ್ನು ಹೊಸ ವರ್ಷವೆಂದು ಆಚರಿಸಲು ಜನ ನಿರ್ಧರಿಸಿದರು. ಹೀಗೆ ಏಸುಕ್ರಿಸ್ತನನ್ನು ವೈಭವೀಕರಿಸುವುದ